DAY & DATE: WEDNESDAY, OCTOBER 28th, 2026

Matter: BNMIT is Launching Centre of Excellence in Innovation in Deeptech & Clean Energy in association with GreenH2 India & New Energy Opportunities Limited (NEO) Australia

As appeared in the Newspapers:

VIJAYA KARNATAKA
(Namma Bengaluru, Page No. 08)

ಬಿಎನ್‌ಎಂಐಟಿಯಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಆರಂಭ



ಬೆಂಗಳೂರು: ಬಿಎನ್‌ಎಂಐಟಿ, ಗ್ರೀನ್ ಎಚ್ 2 ಇಂಡಿಯಾ ಮತ್ತು ಹೊಸ ಇಂಧನ ಅವಕಾಶಗಳ ಕಂಪನಿ (ನಿಯೋ) ಜೊತೆಗೂಡಿ ತನ್ನ ಕ್ಯಾಂಪಸ್‌ನಲ್ಲಿ ಆರಂಭಿಸಿದ 'ಡೀಪ್‌ಟೆಕ್ ಮತ್ತು ಕ್ಲೀನ್ ಎನರ್ಜಿ ಕ್ಷೇತ್ರದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಇನೋವೇಷನ್' ಸೆಂಟರ್ ಅನ್ನು ಗ್ರೀನ್‌ಎಚ್2 ಇಂಡಿಯಾ ಕಂಪನಿಯ ಸಿಇಒ ಜಯ್ ಸಿನ್ಹಾ ಬಿಎನ್ ಎಂಐಟಿಯ ಅಧ್ಯಕ್ಷ ನಾರಾಯಣ ರಾವ್ ಆರ್. ಮಾನೆ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಜಯ್ ಸಿನ್ಹಾ "ದೇಶದಲ್ಲಿ ಕ್ಲೀನ್ ಎನರ್ಜಿ ಮತ್ತು ಡೀಪ್ ಟೆಕ್ ಬಗ್ಗೆ ಹಲವಾರು ಸಂಶೋಧನೆಗಳು ಪ್ರಗತಿಯಲ್ಲಿವೆ. ನಾವು ಈ ಕ್ಷೇತ್ರದಲ್ಲಿ ಸಂಶೋಧನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಈ ಕಾಲೇಜಿನಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರವನ್ನು ತೆರೆದಿದ್ದೇವೆ. ಇದರಿಂದ ವಿದ್ಯಾರ್ಥಿಗಳು ಮತ್ತು ಬೋಧಕರು ಹೆಚ್ಚು ಸಂಶೋಧನೆ ನಡೆಸಬಹುದಾಗಿದ್ದು, ಅವರ ಪ್ರಾಜೆಕ್ಟ್‌ಗಳನ್ನು ನಾವು ಉತ್ಪನ್ನವಾಗಿ ಪರಿವರ್ತಿಸಿ ಮಾರಾಟಕ್ಕೆ ವ್ಯವಸ್ಥೆ ಮಾಡಿಕೊಡಲಾಗುವುದು," ಎಂದರು.

ಈ ವೇಳೆ ಆಲಾಯ್ ಪಾರ್ಟನರ್ ಸಿಇಒ ಎಲಿಯಟ್ ಪಾರ್ಕರ್, ಕ್ಲಾಸಿಕ್ ಟೆಕ್ನಾಲಜಿ ಉಪಾಧ್ಯಕ್ಷ ಅಕಿರಾ ತನಕ, ಗ್ರಫೈನ್ ಇನೋವೇಷನ್ ಮಾಚಿಸ್ಟರ್ನ್ ಸಿಇಒ ಡಾ. ವಿವೇಕ್ ಕೊಂಚೆರಿ, ಬಿಎನ್ ಎಂಐಟಿ ನಿರ್ದೇಶಕ ಪ್ರೊ. ಟಿ. ಜೆ. ರಾಮಮೂರ್ತಿ, ಹೆಚ್ಚುವರಿ ನಿರ್ದೇಶಕ ಹಾಗೂ ಪ್ರಾಂಶುಪಾಲರಾದ ಡಾ. ಎಸ್. ವೈ. ಕುಲಕರ್ಣಿ, ಡೀನ್ ಪ್ರೊ. ಈಶ್ವರ್ ಎನ್. ಮಾನೆ, ಉಪನಿರ್ದೇಶಕ ಡಾ.ಜಿ. ಎನ್. ಕೃಷ್ಣಮೂರ್ತಿ ಇದ್ದರು.